**ಇಂದು ದಿನಾಂಕಃ 05-12-2024 ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಪ್ರತಿವಾದಿ ಪರವಾಗಿ ಶ್ರೀ SGJ ವಕೀಲರಿಂದಃ-**

ನನ್ನ ತಾಯಿ ಹೆಸರು ಕಸ್ತೂರಿಬಾಯಿ. ಈ ಪ್ರಕರಣದ 1ನೇ ವಾದಿ ನನ್ನ ತಾಯಿ ಎಂದರೆ ಸರಿ. ನನ್ನ ತಂದೆ 2006 ರಲ್ಲಿ ಮೃತಪಟ್ಟಿರುತ್ತಾರೆ. ನನ್ನ ತಂದೆಯ ಸಹೋದರನಾದ ಭದ್ರಯ್ಯ ರವರಿಗೆ 3 ಎಕರೆ ಜಮೀನು, ಶಂಕ್ರಯ್ಯ ರವರಿಗೆ 3 ಎಕರೆ ಜಮೀನು ಮತ್ತು ನನ್ನ ತಂದೆಯಾದ ಗುರುಸಿದ್ದಯ್ಯ ರವರಿಗೆ 3 ಎಕೆರ ಜಮೀನು ಇತ್ತು. ನನ್ನ ತಂದೆ ಜಮೀನು ಈಗ ಪ್ರತಿವಾದಿ ಹೆಸರಿನಲ್ಲಿದೆ. ಯಾವ ಆಧಾರದ ಮೆಲೆ ದಾವಾ ಜಮಿನು ಪ್ರತಿವಾದಿ ಹೆಸರಿನಲ್ಲಿ ಆಗಿದೆ ಎಂದು ನನಗೆ ಗೊತ್ತಿಲ್ಲ.

ಪಹಣಿ ಪತ್ರಿಕೆಯನ್ನು ನೋಡಿದಾಗ ದಾವಾ ಜಮೀನು ಪ್ರತಿವಾದಿ ಹೆಸರಿನಲಿ ಆಗಿರುವುದು ಗೊತ್ತಾಗಿರುತ್ತದೆ. ನಾನು ಪಿಯುಸಿ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ಸಾಮಾನ್ಯವಾಗಿ ಪಹಣಿಯನ್ನು ನೋಡಿದರೆ ಹೇಗೆ ವರ್ಗಾವಣೆ ಆಗಿದೆ ಎಂದು ಗೊತ್ತಾಗುತ್ತದೆ ಎಂದರೆ ಸರಿ. ನನ್ನ ತಂದೆ ಹೆಸರಿನಿಂದ ಪ್ರತಿವಾದಿ ಹೆಸರಿಗೆ ವರ್ಗಾವಣೆ ಆಗಿರುತ್ತದೆ ಎಂದರೆ ಸಾಕ್ಷಿ ವರ್ಗಾವಣೆ ಆಗಿಲ ಎಂದು ನುಡಿಯುತ್ತಾರೆ. ನಾನು ದಾವಾ ಜಮೀನಿನ ವರ್ಗಾವಣೆಗಾಗಿ ಸಲಿಸಿದ ಅರ್ಜಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ದಿನಾಂಕಃ 03-05-1999 ರಂದು ನನ್ನ ತಂದೆ ಗುರುಸಿದ್ದಯ್ಯ ರವರು ಪ್ರತಿವಾದಿಗೆ ಮಾರಾಟ ಪತ್ರ ಸಂಖ್ಯೇ 104/1999-2000 ಅನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ನಾನು ಈ ದಾವೆ ಹೂಡುವ ಮೊದಲು ಯಾವುದೇ ವಿಚಾರಣೆ ಮಾಡಿಲ್ಲ ಎಂದರೆ ಸರಿ. ಪ್ರತಿವಾದಿ ಹೆಸರಿಗೆ ದಾವಾ ಜಮೀನು ನೊಂದಣಿ ಆದ ನಂತರ ಪಹಣಿ ಪತ್ರಿಕೆಗಳು ಪ್ರತಿವಾದಿ ಹೆಸರಿನಲ್ಲಿವೆ. ನಾನಾಗಲೀ ನನ್ನ ತಾಯಿಯಾಗಲೀ ಮಾರಾಟ ಪತ್ರ ಅಥವಾ ವರ್ಗಾವಣೆ ರದ್ದುಕೋರಿ ಯಾವುದೇ ಅರ್ಜಿಯನ್ನು ಸಲ್ಲಿಸಿಲ್ಲ ಎಂದರೆ ಸರಿ.

ನನ್ನ ತಂದೆಗೆ ಮೂರು ಜನ ಗಂಡುಮಕ್ಕಳು ಮತ್ತು ಮೂರು ಹೆಣ್ಣು ಮಕ್ಕಳು ಇದ್ದಾರೆ. ನನಗೆ ಇನ್ನೊಬ್ಬ ತಾಯಿ ಇದ್ದು ಅವರ ಹೆಸರು ಚಂದ್ರಮ ಇರುತ್ತದೆ. ಚಂದ್ರಮ್ಮ ರವರಿಗೆ ಮಕ್ಕಳು ಇಲ್ಲ. ನನ್ನ ತಂದೆಯ ಮಕ್ಕಳ ಮದುವೆ ಖರ್ಚು ಎಷ್ಟು ಆಗಿರುವ ಬಗ್ಗೆ ಯಾವುದೇ ದಾಖಲೆ ಇಲ್ಲ. ನನ್ನ ತಂದೆಯ 6 ಜನ ಮಕ್ಕಳು ಸರಕಾರಿ ನೌರರರು ಅಲ ಎಂದರೆ ಸರಿ. ನಮ್ಮದು ದೊಡ್ಡ ಕುಟುಂಬ ಇದ್ದ ಕಾರಣ ಆದಾಯ ಕಡಿಮೆ ಬೀಳುತ್ತಿತ್ತು ಎಂದು ಸೂಚಿಸಿದಾಗ ಸಾಕ್ಷಿ ನನ್ನ ತಂದೆ ಶಿಕ್ಷಕರಿದು ಮತ್ತು ಅವರಿಗೆ ಜಮಿನು ಸಹ ಇತ್ತು ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಒಂದು ಮದುವೆ ಮಾಡಲು 3 ಲಕ್ಷ ಖರ್ಚು ಆಗುತ್ತದೆ ಎಂದರೆ ಸಾಕ್ಷಿ 1 ಲಕ್ಷ ಖರ್ಚು ಬೇಕಾಗುತ್ತದೆ ಎಂದು ನುಡಿಯುತ್ತಾರೆ. ಹಾಗಿದ್ದರೆ 6 ಮಕಳ ಮದುವೆ ಖರ್ಚು 6 ಲಕ್ಷ ಬೇಕಾಗುತ್ತದೆ ಎಂದರೆ ಸರಿ. ಕಾಶಂಪುರ ಗ್ರಾಮದಲ್ಲಿರುವ ಜಮೀನಿನಿಂದ ಎಷ್ಟು ಆದಾಯ ಬಂದಿರುವ ಬಗ್ಗೆ ನ್ಯಾಯಾಲಯಕ್ಕೆ

ದಾಖಲೆಗಳು ಹಾಜರುಪಡಿಸಿಲ್ಲ ಎಂದರೆ ಸರಿ. ನಮ್ಮ ಕುಟುಂಬದ ಎಲ್ಲಾ ವ್ಯವಹಾರಗಳನ್ನು ನಮ್ಮ ತಂದೆ ನೋಡಿಕೊಳ್ಳುತಿದ್ದರು ಎಂದರೆ ಸರಿ. ಸಾಲವಾದ ಕಾರಣ ನಮ್ಮ ತಂದೆ ನೊಂದಣಿ ಮುಖಾಂತರ ದಾವಾ ಜಮೀನನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿ ನನ್ನ ಮದುವೆ 1997 ರಲ್ಲಿ ಆಗಿದ್ದು ಮತ್ತು ನೊಂದಣಿ 1999 ಆಗಿರುತ್ತದೆ ಆಗ ನನ್ನ ಸಹಿ ಪಡೆದುಕೊಳ್ಳಬೇಕಿತ್ತು ಎಂದು ನುಡಿಯುತ್ತಾರೆ.

ಸಾಮಾನ್ಯವಾಗಿ ಒಕ್ಕಲುತನ ಮಾಡುವವರು ಪಹಣಿ ಪತ್ರಿಕೆಗಳನ್ನು ನೋಡುತ್ತಾರೆ ಹಾಗೂ ನೀವು 20ವರ್ಷಗಳಿಂದ ಪಹಣ ಪತ್ರಿಕೆಯನ್ನು ನೋಡಿದ್ದೀರಾ ಎಂದು ಪ್ರಶ್ನಿಸಿದಾಗ ಸಾಕ್ಷಿ ನೋಡಿಲ್ಲ ಎಂದು ನುಡಿಯುತ್ತಾರೆ. ಕಾನೂನು ಪ್ರಕಾರ ನೊಂದಾಯಿತ ದಾಖಲೆಗಳನ್ನು ರದುಗೊಳಿಸಲು ನನಗೆ ಅಧಿಕಾರ ಇಲ್ಲ ಎಂದರೆ ಸಾಕ್ಷಿ ಮೊದಲು ಸರಿ ಎಂದು ಹೇಳಿ ನಂತರ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ಚಿಕ್ಕಪ್ಪನಿಗೆ ಬಂದ 3 ಎಕರೆ ಜಮೀನು ಸಹ ನನ್ನ ಚಿಕ್ಕಪ್ಪ ಪ್ರತಿವಾದಿಗೆ ನೊಂದಣಿ ಖರೀದಿ ಪತ್ರದ ಮುಖಾಂತರ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ನನ್ನ ತಂದೆ ಸಹ ತಮ್ಮ ಜಮೀನನು ಪ್ರತಿವಾದಿಗೆ ನೊಂದಣಿ ಖರೀದಿ ಪತ್ರದ ಮುಖಾಂತರ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿ ಅದು ಕಾನೂನು ಬಾಹಿರವಾಗಿ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಕಾನೂನುಬಾಹಿರ ಎಂದರೆ ಹೇಗೆ ಎಂದು ಪ್ರಶ್ನಿಸಿದಾಗ ಸಾಕ್ಷಿ ಡುಪ್ಲಿಕೇಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಯಾವ ಆಧಾರದ ಮೇಲೆ ಡುಪ್ಲಿಕೇಟ ಮಾಡಿರುತ್ತಾರೆ ಎಂದು ಪ್ರಶ್ನಿಸಿದಾಗ ಸಾಕ್ಷಿ ನೊಂದಾಯಿ ಖರೀದಿ ಪತ್ರದಲಿಲರುವ ಸಹಿ ನನ್ನ ತಂದೆಯ ಸಹಿ ಇರುವುದಿಲ್ಲ ಎಂದು ನುಡಿಯುತ್ತಾರೆ. ದಾವಾ ಸಲ್ಲಿಸುವ ಸಮಯಕ್ಕೆ ದಾವೆಯ ಜೊತೆ ನನ್ನ ತಂದೆಯ ಸೇವಾ ಪುಸ್ತಕವನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ. ನಾನು ನನ್ನ ತಂದೆಯ ಸಹಿ ತೋರಿಸಲು ಯಾವುದೇ ದಖಲೆ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ನನ್ನ ತಂದೆಯ ಪಿಂಚಣಿ ಪುಸ್ತಕ ಸಲ್ಲಿಸಿದೇನೆ ಎಂದು ನುಡಿಯುತ್ತಾರೆ.

ನನ್ನ ತಂದೆ ಸಂಪೂರ್ಣ ಹಣ ಪಡೆದುಕೂಂಡು ನೊಂದಣಿ ಮಾಡಿಕೊಟ್ಟರೂ ಸಹ ಪ್ರತಿವಾದಿಗೆ ಸತಾಯಿಸಲು ಸುಳು ದಾವೆಯನ್ನು ಸಲ್ಲಿಸಿದ್ದೆನೆ ಎಂದರೆ ಸರಿಯಲ್ಲ. ನನ್ನ ತಂದೆಗೆ ಕುಡಿಯುವ ಅಥವಾ ಇಸ್ಪೇಟ ಆಡುವ ಚಟ ಇರಲಿಲ್ಲ ಮತ್ತು ಅವರು ಒಳ್ಳೆಯ ವ್ಯಕ್ತಿ ಇದ್ದರು. ನನ್ನ ತಂದೆ ಮಾರಾಟ ಮಾಡಿರುವ ನೊಂದಾಯಿತ ದಾಖಲೆ ಮೇಲೆ ಯಾರು ಸಹಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಾಗಶೆಟ್ಟಿ ತಂದೆ ಸಂಗಪ್ಪ ಚಿಂಚೋಳಿ ರವರು ನನಗೆ ಗೊತ್ತಿಲ್ಲ. ವೀರಯ್ಯ ತಂದೆ ಸಿದ್ರಾಮಯ್ಯ ಹಸರಗುಂಡಿಗಿ ರವರು ನನಗೆ ಗೊತ್ತು. ಬಸವರಾಜ ತಂದೆ ಸಿದ್ದಯ್ಯ ಕಾಶಮಪುರ ರವರು ನನಗೆ ಗೊತ್ತು. ಈ ಮೇಲೆ ಹೇಳಿರುವ ವ್ಯಕ್ತಿಗಳಾದ ನಾಗಶೆಟ್ಟಿ ವೀರಯ್ಯ ಮತ್ತು ಬಸವರಾಜ ರವರು ನನ್ನ ತಂದೆ ಬರೆದುಕೊಟ್ಟಿರುವ ನೊಂದಾಯಿಸ ದಾಖಲೆ ಮೇಲೆ ಸಹಿ ಮಾಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ದಿನಾಂಕಃ 20-06-1999 ರಂದು ನನ್ನ ತಂದೆ ಬರೆದುಕೊಟ್ಟಿರುವ ಮಾರಾಟ ಪತ್ರದಂತೆ ಪ್ರತಿವಾದಿಗೆ ದಾವಾ ಜಮೀನು ವರ್ಗಾವಣೆ ಆಗಿರುತ್ತದೆ ಎಂದರೆ ಸಾಕ್ಷಿ ತಹಶೀಲ್ದಾರ ಕಚೇರಿಯಲ್ಲಿ ವರ್ಗಾವಣೆ ದಾಖಲೆ ಇಲ್ಲ ಎಂದು ನನಗೇ ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ. ವರ್ಗವಣೆ ದಾಖಲೆ ಬೇಕು ಎಂದು ನಾನು ತಹಶೀಲ್ದಾರ ಕಚೇರಿಯಲ್ಲಿ ಅರ್ಜಿಯನ್ನು ಸಲ್ಲಿಸಿದ್ದೇನೆ. ಸದರಿ ಅರ್ಜಿಯನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ಈ ರೀತಿ ವರ್ಗಾವಣೆ ದಾಖಲೆ ಇಲ್ಲ ಎಂದು ಬರೆದುಕೊಡಿ ಎಂದು ತಹಶೀಲ್ದಾರ ಕಚೇರಿಯಲ್ಲಿ ಕೇಳಿದ್ದೀರಾ ಎಂದು ಪ್ರಶ್ನಿಸಿದಾಗ ಸಾಕ್ಷಿ ಕೇಳಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಗೆ ಸತಾಯಿಸಲು ನಾನು ಮತು ನನ್ನ ತಾಯಿ ಸೇರಿ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಶಪಥ ಪತ್ರ ಸಲ್ಲಿಸಿ ಈ ದಿನ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**C/C ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**
**ಚಿಂಚೋಳಿ**